(ಇಂದು ದಿನಾಂಕಃ 11-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಬಿ. ಎಸ ವಕೀಲರಿಂದ :**

1. ನನ್ನ ತಂದೆಯ ಮಾವನ ಹೆಸರು ಗುಂಡಪ್ಪ ಎಂದರೆ ಸರಿ. ಗುಂಡಪ್ಪನ ಮಕ್ಕಳು ಪಾಲು ಮಾಡಿಕೊಂಡಿರುತ್ತಾರಾ ಎಂದರೆ ಸಾಕ್ಷಿ ಅವರು ಕೇಸ ಹಾಕಿ ಪಾಲು ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಅವರು ಅಸಲು ದಾವೆ ಸಂಖ್ಯೆ 48/2014 ದಾವೆಯನ್ನು ಸಲ್ಲಿಸಿ ಪಾಲು ಮಾಡಿಕೊಂಡಿರುತ್ತಾರೆ. ಯಾವ ಯಾವ ಆಸ್ತಿಗಳನ್ನು ಪಾಲು ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಕೆಲಒಂದು ನೆನಪಿದೆ ಎಂದು ಹೇಳುತ್ತಾರೆ. ಸರ್ವೆ ನಂಬರ 94 ರಲ್ಲಿ 08 ಎಕರೆ ರುಕ್ಮಿಣಿ ಬಾಯಿಯವರಿಗೆ, ಸರ್ವೆ ನಂಬರ 94 ರಲ್ಲಿ ಉಳಿದ ಜಮೀನು ರುಕ್ಮಿಣಿಬಾಯ ಅಣ್ಣನಿಗೆ ಕೊಟ್ಟಿರುತ್ತಾರೆ. ಸಾಮಾನ್ಯವಾಗಿ ಆರ್ಥಿಕ ಪರಿಸ್ಥಿತಿ ಕೆಟ್ಟದಾಗಿದ್ದಾಗ ಆಸ್ತಿಗಳನ್ನು ಮಾರಾಟ ಮಾಡುತ್ತಾರೆ ಎಂದರೆ ಸಾಕ್ಷಿ ಹಾಗೇನು ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರದು ಜಮೀನು ಮಾರಾಟ ಮಾಡಿಕೊಳ್ಳಬಹುದು ಅಥವಾ ಬೇರೆ ಕಡೆಹೋಗಿ ಇರಬಹುದು ಎಂದು ಹೇಳುತ್ತಾರೆ. ನನ್ನ ತಾಯಿಯ ಅಣ್ಣ-ತಮ್ಮಂದಿರು ಯಾವ ಸರ್ವೆ ನಂಬರ ಜಮೀನು ಮಾರಾಟ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನನ್ನ ತಾಯಿಯ ಅಣ್ಣ-ತಮ್ಮಂದಿರು ಯಾವ ಸರ್ವೆ ನಂಬರ ಜಮೀನು ಮಾರಾಟ ಮಾಡಿರುತ್ತಾರೆ ಆ ಜಮೀನು ನನ್ನ ಕಾಕ ಶಾಮರಾವರವರ ಜಮೀನಿನ ಪಶ್ಚಿಮ ದಿಕ್ಕಿಗೆ ಇದೆ ಎಂದರೆ ಸರಿಯಲ್ಲ. ನನ್ನ ಸೋದರ ಮಾವ ಜಮೀನನ್ನುಯಾವ ವರ್ಷ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈಗ ಜಮೀನಿನ ಮಾಲಿಕ ಮತ್ತು ಸ್ವಾಧೀನದಾರರು ಖರೀದಿದಾರರು ಇರುತ್ತಾರೆ ಎಂದರೆ ಸಾಕ್ಷಿ ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ, ಇದು ಹೇಗೆ ಗೊತ್ತಾಗುತ್ತದೆ ಎಂದು ಹೇಳುತ್ತಾರೆ.

2. ನನ್ನ ತಾಯಿಗೆ ಸರ್ವೆ ನಂಬರ 94 ರಲ್ಲಿ 08 ಎಕರೆ ಜಮೀನು ಅಸಲು ದಾವೆ ಸಂಖ್ಯೆ 48/2014 ರ ಆದೇಶದ ಪ್ರಕಾರ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸದರಿ ಜಮೀನನ್ನು ನನ್ನ ತಾಯಿಗೆ ಅವರ ಮದುವೆ ಸಮಯದಲ್ಲಿ ಕೊಟ್ಟಿರುತ್ತಾರೆ ಮುಂದೆ ತಕರಾರು ಬರಬರದು ಎಂದು 1996 ರಲ್ಲಿ ಪಹಣಿ ಮಾಡಿಕೊಟ್ಟಿರುತ್ತಾರೆ, ನನ್ನ ತಾಯಿಯ ಅಣ್ಣ ಕೇಸ ಹಾಕಿದಾಗ ಆ ಕೇಸಿನಲ್ಲಿ ರಾಜಿ ಆಗಿ ನನ್ನ ತಾಯಿಗೆ ಆ ಜಮೀನನ್ನು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ.ನನ್ನ ತಾಯಿಗೆ ಆ ಜಮೀನನ್ನು ಯಾವ ರೂಪದಲ್ಲಿ ಕೊಟ್ಟಿದ್ದರು ಎಂದರೆ ಸಾಕ್ಷಿ ಅವರಿಗೆ ಬದುಕಲು ಜೀವನ ಉಪಯೋಗಕ್ಕಾಗಿ ಕೊಟ್ಟಿದ್ದರು ಎಂದು ಹೇಳುತ್ತಾರೆ. ಸದರಿ ಜಮೀನನ್ನು ನನ್ನ ತಾಯಿಗೆ ಅವರ ಮದುವೆ ಸಮಯದಲ್ಲಿ ಕೊಟ್ಟಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಸಲ್ಲಿಸಿರುತ್ತೇನೆ ಡಿಕ್ರಿ ಹಾಕಿರುತ್ತೇನೆ ಎಂದು ಹೇಳುತ್ತಾರೆ. ಸುಬ್ಬಮ್ಮರವರು ಈ ದಾವೆ ಸಲ್ಲಿಸಿದ ನಂತರ ನಾವು ಅವರಿಗೆ ಹಿಸ್ಸೆ ಕೊಡಬಾರದು ಎಂಬ ಉದ್ದೇಶದಿಂದ ಅಸಲು ದಾವೆ ಸಂಖ್ಯೆ 48/2014 ಸಲ್ಲಿಸಿ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಯಿಂದ ನನ್ನ ಸೋದರಮಾವ ಮತ್ತು ಗುಂಡಪ್ಪರವರು ರೂ.5,00,000/-ಸಾಲ ತೆಗೆದುಕೊಂಡಿದ್ದರು ಆದ್ದರಿಂದ ಸರ್ವೆ ನಂಬರ 94 ರಲ್ಲಿ 08 ಎಕರೆ ಜಮೀನನ್ನು 1996 ರಲ್ಲಿ ನೇರವಾಗಿ ನನ್ನ ತಾಯಿಯ ಹೆಸರಿಗೆ ಮ್ಯುಟೇಷನ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸೋದರಮಾವ ಮತ್ತು ಗುಂಡಪ್ಪರವರು ಆರ್ಥಿಕ ಪರಿಸ್ಥಿತ ಕುಂಠಿತವಾಗಿದ್ದರಿಂದ ಹಾಗೂ ನನ್ನ ತಂದೆಯಿಂದ ರೂ.5,00,000/-ಸಾಲವಾಗಿ ಪಡೆದಿದ್ದರು ಮತ್ತು ಅದೆ ಆರ್ಥಿಕ ಪರಿಸ್ಥಿತಿಯಿಂದ ನನ ಕಾಕಾರವರ ಜಮೀನಿನ ಪಶ್ಚಿಮ ದಿಕ್ಕಿಗೆ ಇರುವ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ಅನೀಲ ಮತ್ತು ನಾರಾಯಣರವರಿಗೆ ಯಾವುದೇ ಸ್ವಂತ ಕೆಲಸ ಇಲ್ಲ ಎಂದರೆ ಸಾಕ್ಷಿ ಅನೀಲಕುಮಾರ ಒಕ್ಕಲುತನ ಮಾಡುತ್ತಾರೆ ಎಂದು ಹೇಳುತ್ತಾರೆ. ನನ್ನ ತಂದೆ ನನ್ನ, ಉದಯಕುಮಾರ, ನಾರಾಯಣ, ಅನೀಲರವರ ಹೆಸರಿಗೆ ಜಮೀನನ್ನು ಖರೀದಿ ಮಾಡುವ ಸಮಯದಲ್ಲಿ ನಾವೆಲ್ಲ ಅಪ್ರಾಪ್ತ ವಯಸ್ಕರಾಗಿದ್ದೆವು ಎಂದರೆ ಸಾಕ್ಷಿ ಕೆಲ ಒಂದು ಆಸ್ತಿ ಖರೀದಿ ಮಾಡುವಾಗ ನಾವು ಅಪ್ರಾಪ್ತರು ಇದ್ದೆ ಆದರೆ ನನ್ನ ತಾಯಿಯ ಸಹಾಯದಿದ ಖರೀದಿ ಮಾಡಿರುತ್ತಾರೆ ಮತ್ತು ಉದಯಕುಮಾರ, ನಾರಾಯಣ, ಅನೀಲರವರು ವಯಸ್ಕಾಗಿದ್ದರು ಎಂದು ಹೇಳುತ್ತಾರೆ. 1996 ರಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸಾಕ್ಷಿ ಹೆಸರಿಗೆ ಇರಲಿಲ್ಲ ಆದರೆ ಸ್ವಾಧೀನದಲ್ಲಿ ಇದ್ದರು ಎಂದು ಹೇಳುತ್ತಾರೆ. ಕೈಬರಹದಲ್ಲಿ ಪಹಣಿ ಬರೆಯುವಾಗ ಮಾಲಿಕರು ಯಾರು ಇದ್ದರು ಸಹ ಕಬ್ಜೆ ಕಾಲಂನಲ್ಲಿ ಯಾರು ಸ್ವಾಧೀನದಲ್ಲಿ ಇರುತ್ತಾರೊ ಅವರ ಹೆಸರು ಬರೆಯುತ್ತಾರೆ ಎಂದರೆ ಸಾಕ್ಷಿ ನಾವು ಹೋಗಿ ಬರೆಸಿದರೆ ಆ ರೀತಿ ಬರೆಯುತ್ತಾರೆ ಎಂದು ಹೇಳುತ್ತಾರೆ. ಪಹಣಿಯಲ್ಲಿ ಹೆಸರು ಬರೆಸಬೇಕು ಇಲ್ಲವೊ ಎಂದು ನನ್ನ ತಂದೆಗೆ ಚನ್ನಾಗಿ ಗೊತ್ತಿತ್ತು ಎಂದರೆ ಸಾಕ್ಷಿ ಅದು ನನ್ನ ಮುತ್ಯಾಗೆ ಗೊತ್ತು ಅವರ ಆಸ್ತಿ ಎಂದು ಹೇಳುತ್ತಾರೆ. 1996 ರವರಗೆ ನನ್ನ ಮುತ್ಯಾ ತೆರಿಗೆ ಕಟ್ಟುತ್ತಾ ಬಂದಿರುತ್ತಾರೆ ಅದಾದ ನಂತರ ನನ್ನ ತಾಯಿ ಕಟ್ಟಿರಬಹುದು ಎಂದು ಹೇಳುತ್ತಾರೆ. 1996 ರವರಗೆ ಸರ್ವೆ ನಂಬರ 94 ರಲ್ಲಿ 08 ಎಕರೆ ರುಕ್ಮಿಣಿಬಾಯಿಗೆ ಸಂಬಂಧ ಪಟ್ಟದ್ದು ಆಗಿತ್ತು ಎಂದು ತೋರಿಸಲು ಯಾವುದೇ ಸರಕಾರಿ ದಾಖಲೆ ಇಲ್ಲ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ಹೇಳುತ್ತಾರೆ. ಆ ತರಹದ ಯಾವುದೇ ದಾಖಲೆ ಇಲ್ಲ ಆದ್ದರಿಂದ ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

4. ನನ್ನ ಮುತ್ಯ ಗುಂಡಪ್ಪ ತೀರಿಕೊಳ್ಳುವ ಮೊದಲು ಅವರಿಗೆ ಪಾರ್ಸಿರೋಗ ಆಗಿತ್ತು ಎಂದರೆ ಸರಿ. ನನ್ನ ಮುತ್ಯ ಗುಂಡಪ್ಪ ಬದುಕಿರುವವರಗೆ ರಾಮತೀರ್ಥ ಮತ್ತು ಹಲಚೇರಾಕ್ಕೆ ಬರುವುದು ಹೋಗುವುದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾಗೇಂದ್ರಪ್ಪ ಜೀವಂತ ಇದ್ದಾಗಲೂ ಕೂಡ ನನ್ನ ಮುತ್ಯ ಗುಂಡಪ್ಪ ಜಮೀನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ನಾಗೇಂದ್ರಪ್ಪನ ಹೆಸರಿಗೆ ಖರೀದಿ ಆಗಿತ್ತು ಎಂದು ಹೇಳುತ್ತಾರೆ. ಶಾಮರಾವ ಸಣ್ಣವರಿದ್ದಾಗಲು ಕೂಡ ಹಲಚೇರಾದಲ್ಲಿ ಒಂದು ಜಮೀನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಚಂದ್ರಕಾಂತ ಸಣ್ಣವರಿದ್ದಾಗಲು ಕೂಡ ಹಲಚೇರಾದಲ್ಲಿ ಒಂದು ಜಮೀನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿ 3 ಎಕರೆ 14 ಗುಂಟೆ ಜಮೀನನ್ನು ಅವರು ವಯಸ್ಸಿಗೆ ಬಂದ ನಂತರ ಖರೀದಿ ಮಾಡಿದ್ದರು ಎಂದು ಹೇಳುತ್ತಾರೆ. ಸರ್ವೆ ನಂಬರ 227 ರಲ್ಲಿ 3 ಖರೀದಿ ನೊಂದಣಿ ಪತ್ರಗಳನ್ನು ಮಾಡುವಾಗ ರುಕ್ಮಿಣಿಬಾಯ ಹೆಸರಿಗೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಲಚೇರಾ ನನ್ನ ತಾಯಿಯ ಮನೆ ಇರುತ್ತದೆ ಮದುವೆ ಆದ ನಂತರ ನನ್ನ ತಂದೆ ಹಲಚೇರಾ ಗ್ರಾಮಕ್ಕೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಆದ್ದರಿಂದ ನನ್ನ ತಾಯಿ ರುಕ್ಮಿಣಿಯವರಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ರುಕ್ಮಿಣಿಯವರಿಗೆ ಸದರಿ ಜಮೀನನ್ನು ಮದುವೆ ಸಮಯದಲ್ಲಿ ಕೊಟ್ಟಿದ್ದು ಆ ಜಮೀನಿಂದ ನನ್ನ ತಾಯಿಗೆ ಆದಾಯ ಬರುತ್ತಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ವಾದಿಯು ಈ ದಾವೆ ಸಲ್ಲಿಸಿದ ನಂತರ ವಾದಿಗೆ ಗೊತ್ತಿಲ್ಲದಂತೆ ಮರೆ ಮಾಚಿ ನಾವು ಡಿಕ್ರಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಅವರ ತಂದೆಗೆ ಸಾಕಷ್ಟು ಆದಾಯ ಇತ್ತು ಅವರೆ ಆ ಜಮೀನ್ನು ಖರೀದಿ ಮಾಡಿ ನನ್ನ ತಂದೆಯು ಗ್ರಾಮ ಲೆಕ್ಕಾಧಿಕಾರಿ ಆಗಿದ್ದರಿಂದ ಆ ಜಮೀನನ್ನು ನನ್ನ ತಾಯಿಯ ಹೆಸರಿಗೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ

94 ರಲ್ಲಿ ವಾದಿಗೆ ಜಂಟಿ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ತಂದೆಯು 1976 ರಲ್ಲಿ ರೂ.4,000/- ಸಂಪಾದನೆ ಮಾಡುತ್ತಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆ ಹೆಚ್ಚಿಗೆ ಆದಾಯ ಬರುತ್ತಿತ್ತು ಎಂದು ಹೇಳುತ್ತಾರೆ. ಸರಕಾರಿ ನೌಕರರಿಗೆ ಯಾವಾಗ ಎಷ್ಟು ಸಂಬಂಳ ಬರುತ್ತಿತ್ತು ಎಂದು ಈಗಲು ಗೊತ್ತಾಗುತ್ತದೆ ಎಂದರೆ ಸಾಕ್ಷಿ ಮೊದಲು ಇದ್ದ ಬಗ್ಗೆ ಬರುವುದಿಲ್ಲ ಈಗ ಬರುತ್ತದೆ ಎಂದು ಹೇಳುತ್ತಾರೆ. ಸರಕಾರಿ ನೌಕರರಿಗೆ ಸೇವಾ ಪುಸ್ತಕ ಇರುತ್ತದೆ ಎಂದರೆ ಸರಿ. ಆ ಸೇವಾ ಪುಸ್ತಕದಲ್ಲಿ ಅವರಿಗೆ ಎಷ್ಟು ಸಂಬಳ ಬರುತ್ತದೆ ಎಂದು ಬರೆಯುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಿವೃತ ಸರಕಾರಿ ನೌಕರರ ಸೇವಾ ಪುಸ್ತಕದಲ್ಲಿ ಈಗಲು ಅವರ ಇಲಾಖೆಯಲ್ಲಿ ಇಟ್ಟಿರುತ್ತಾರಾ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನನ್ನ ತಂದೆ ಬಂದು ಸಾಕ್ಷ ಹೇಳಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ನಾನು ಸಾಕ್ಷಿ ಕೊಡಲು ಬಂದಿರುತ್ತೇನೆ ಎಂದರೆ ಸಾಕ್ಷಿ ನಾನೇ ಪಾರ್ಟಿ ಆಗಿದ್ದರಿಂದ ಸಾಕ್ಷಿ ಕೊಡುತ್ತಿದ್ದೇನೆ ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಇರುವ ಎಲ್ಲಾ ಪಕ್ಷಗಾರರು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಮೌಖಿಕ ವಿಭಾಗ ಆಗಿತ್ತು ಎಂದು ಹೇಳುತ್ತಾರೆ. ಮೌಖಿಕ ವಿಭಾಗ ಆಗಿತ್ತು ಎಂದು ನಾನು ಹೇಳುತ್ತಿದ್ದು ಆ ಮೌಖಿಕ ವಿಭಾಗ ಆಧಾರದ ಮೇಲೆ ಯಾರಾದರು ಕಂದಾಯ ದಾಖಲೆಗಳನ್ನು ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಮಾಡಿಕೊಂಡಿಲ್ಲ ಆದರೆ ಅಡಮಾನ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸುಬ್ಬಮ್ಮ ಯಾವ ಆಸ್ತಿ ಅಡಮಾನ ಮಾಡಿರುತ್ತಾರೆ ಎಂದರೆ ಸಾಕ್ಷಿ ಸುಬ್ಬಮ್ಮರವರು ಮಾಡಿಲ್ಲ ಎಂದು ಹೇಳುತ್ತಾರೆ. ಎಲ್ಲಾ ದಾವಾ ಆಸ್ತಿಗಳು ಇಲ್ಲಿಯವರೆಗೆ ವಿಭಾಗ ಆಗಿಲ್ಲ ಇದು ಜಂಟಿ ಕುಟುಂಬದ ಆಸ್ತಿಗಳು

ಎಂದರೆ ಸರಿಯಲ್ಲ. ನನ್ನ ತಂದೆಯ ಜಂಟಿ ಕುಟುಂಬದ ಆದಾಯದಿಂದ ಆಸ್ತಿಗಳನ್ನು ಖರೀದಿಮಾಡಿದ್ದರಿಂದ ಆ ಆಸ್ತಿಗಳು ಕೂಡ ಜಂಟಿ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಎಲ್ಲಾ ದಾವಾ ಆಸ್ತಿಗಳು ಇಲ್ಲಿಯವರೆಗೆ ವಿಭಾಗ ಆಗಿಲ್ಲ ಇದು ಜಂಟಿ ಕುಟುಂಬದ ಆಸ್ತಿಗಳು ಆಗಿದ್ದರಿಂದ ವಾದಿಗೆ ಸಮಾನವಾದ ಹಕ್ಕು ಇದೆ ಎಂದರೆ ಸರಿಯಲ್ಲ. ವಾದಿಗೆ ಪಾಲು ಕೊಡಬಾರದು ಎಂಬ ಉದ್ದೇಶದಿಂದ ನನ್ನ ತಂದೆ ಖರೀದಿ ಮಾಡಿರುವ ಆಸ್ತಿ ಇರುತ್ತದೆ ಮತ್ತು ನನ್ನ ತಾಯಿಗೆ ದಾನ ರೂಪದಲ್ಲಿ ಬಂದ ಆಸ್ತಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಅವರು ಈ ದಾವೆ ಸಲ್ಲಿಸಿದ ನಂತರ ಅವರಿಗೆ ಗೊತ್ತಿಲ್ಲದಂತೆ ನಾವು ರಾಜನೀತಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪ್ರತಿವಾದಿ **2** ರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.